★★★

ನನ್ನ ಟೀಮಿನಲ್ಲಿ ಕೆಲಸ ಮಾಡುತ್ತಿದ್ದ ಸಂಜೀವ್ ಘೋಷ್ ನನಗಿಂತ ಎರಡು ವರ್ಷ ಸೀನಿಯರ್. ತನ್ನ ಹೆಂಡತಿಯೊಡನೆ ಒಂದು ವರ್ಷದ ಹಿಂದೆ ಆಸ್ಟ್ರೇಲಿಯಾಗೆ ಬಂದವನು ಕಾಯಮ್ಮಾಗಿ ಇಲ್ಲೇ ನೆಲೆಯೂರಬೇಕೆಂಬ ನಿರ್ಧಾರವನ್ನು ಮಾಡಿದ್ದ. ಪ್ರತಿವಾರವೂ ಹೆಂಡತಿಯೊಡನೆ ಅಮ್ಯೂಸ್ಮೆಂಟ್ ಪಾರ್ಕ್, ಜೂ, ರೆಸ್ಟೋರೆಂಟುಗಳಲ್ಲಿ ತೆಗೆಸಿಕೊಂಡ ಹೊಸ ಹೊಸ ಫೋಟೊಗಳನ್ನು ಫೇಸ್‌ಬುಕ್ಕಿನಲ್ಲಿ ಹಾಕುತ್ತಿದ್ದ. ಅಂದು ನೀರವತೆಯಿಂತ ಕೂಡಿದ್ದ ಮಧ್ಯಾಹ್ನ ನಾವಿಬ್ಬರು ಯಾವುದೋ ಮೀಟಿಂಗಿನಲ್ಲಿದ್ದಾಗ ಎಲ್ಲಿಂದಲೋ ಜೋರು ನಗು, ಕೇಕೆ ಕೇಳಿಸಿತು. ಮೀಟಿಂಗ್ ಮುಗಿಸಿ ರೂಮಿನಿಂದ ಎದ್ದು ಹೊರಗೆ ಬಂದಾಗ ಆಫೀಸಿನ ಪ್ಯಾಂಟ್ರೀಯಲ್ಲಿ ಗುಂಪು ಸೇರಿತ್ತು. ಏನಾಗುತ್ತಿದೆಯೆಂದು ವಿಚಾರಿಸಿದಾಗ **“He is here... and there are always people around him...”** ಎಂದು ಸಂಜೀವ್ ಹೇಳಿದ. ನೀರು ಕುಡಿಯುವ ನೆಪದಲ್ಲಿ ಪ್ಯಾಂಟ್ರಿಯ ಕಡೆಗೆ ಹೋಗಿ ಅಲ್ಲಿ ಸೇರಿದ ಜನರ ನಡುವೆ ಇಣುಕಿದಾಗ ಅವನು ಕಂಡ. ಹಳದೀ ಬಣ್ಣದ ಲೂಸಾದ ಶರ್ಟನ್ನು ಹಾಕಿದ್ದ. ತೆಳುವಾಗಿದ್ದ, ಅಲ್ಲಲ್ಲಿ ನೆರೆತ ಕೂದಲು. ನೀಲಿ ಫ್ರೇಮಿನ ದಪ್ಪ ಕನ್ನಡಕ ಹಾಕಿದ್ದ. ಸುಮಾರು ಆರು ಅಡಿ ಎತ್ತರವಿದ್ದು ಕೈಯಲ್ಲೊಂದು ವೈನ್ ಗ್ಲಾಸನ್ನು ಹಿಡಿದು ತಾನು ನೋಡಿದ ಯಾವುದೋ ಸಿನಿಮಾವೊಂದನ್ನು ವಿಶ್ಲೇಷಿಸುತ್ತಿದ್ದ. ಅಷ್ಟರಲ್ಲಿ ಕೇಕೆ ಹಾಕುತ್ತಾ ನಗುತ್ತಿದ್ದ ಗುಂಪಿನಲ್ಲಿದ್ದ ಹೆಂಗಸೊಬ್ಬಳು **“Oh come on CDG! Let’s get back to work now”** ಎಂದಳು. ಅದಕ್ಕವನು **“Don’t be so boring... learn to have some fun dear!”** ಎಂದವಳನ್ನು ಚುಡಾಯಿಸಿದ. ಹಿಂದೆ ಇದ್ದ ದೊಡ್ಡ ಫ್ರೆಂಚ್ ವಿಂಡೋದಿಂದ ಹೊರಗೆ ಬೃಹದಾಕಾರವಾದ ಸೇಂಟ್ ಮೇರೀಸ್ ಕಾಥೆಡ್ರಲ್ಲಿನ ನೆತ್ತಿಯ ಮೇಲೆ ಕಪ್ಪು ಮೋಡ ಕವಿದಿರುವುದು ಕಂಡಿತು. ದಟ್ಟವಾಗಿ ಕವಿಯುತ್ತಿದ್ದ ಮೋಡಗಳ ಎದುರು, ಎತ್ತರದ ನಿಲುವಿನ, ನಡುವಯಸ್ಸು ತಲುಪುತ್ತಿದ್ದ ಹಳದೀನೀಲಿ ವೇಷದ ಚಾರ್ಲೀ ಡೆಲ್‌ಗ್ರಾಂಡ್ ಎಕೆಎ ಸಿಡಿಜಿ, ಯಾವುದೋ ಅನಾಮಿಕ ಊರಿನ ಯಾವುದೋ ಅಂಚಿನಲ್ಲಿ ನಿಂತ ನ್ಯೂ ಏಜ್ ಸೂಪರ್ ಹೀರೊಥರ ಕಂಡುಬಿಟ್ಟ.

★★★

ಅವಳ ಕಾರಿನಲ್ಲಿ ಗ್ರೇಟ್ ವೆಸ್ಟರ್ನ್ ಹೈವೇಗೆ ಬಂದು ಕೆಲವೇ ನಿಮಿಷಗಳಲ್ಲಿ ಸಿಟಿಯನ್ನು ಹಿಂದೆಹಾಕಿಬಿಟ್ಟೆವು. **“Where are we going?”** ಎಂದು ಹಲವು ಬಾರಿ ಕೇಳಿದ ಮೇಲೆ ಅದು ಅಷ್ಟೇನು ಮುಖ್ಯವಲ್ಲವೇನೋ ಎಂಬಂತೆ **“We are going away!”** ಎಂದು ಸಾರಾ ತಳ್ಳಿಹಾಕಿದಳು. ಬೀಸುತ್ತಿದ್ದ ಗಾಳಿಯ ರಭಸಕ್ಕೆ ಅವಳ ಕೂದಲು ಹಾರುತ್ತಾ ಕೆಂಬಣ್ಣದ ನಡುನಡುವೆಯಿದ್ದ ಬಿಳಿ ಕೂದಲು ಕಾಣುತ್ತಿತ್ತು. ಕಾರಿನ ವೇಗ ಹೆಚ್ಚಿಸಿ ರಸ್ತೆಯನ್ನು ನೋಡುತ್ತಲೇ ಆವಳು ಟೀ ಶರ್ಟ್ ಒಳಗೆ ಬೆನ್ನಗುಂಟಾ ಕೈಹಾಕಿ ತನ್ನ ಬ್ರಾ ಸಡಿಲಿಸಿ, ತೆಗೆದು ಹಿಂದಿನ ಸೀಟಿಗೆ ಕಿತ್ತೆಸೆದಳು. ಸ್ವಲ್ಪ ಹೊತ್ತಿನಲ್ಲಿ ನನಗೆ ಸುಳಿವೇ ಇಲ್ಲದ, ಏರಿಳಿತಗಳಿದ್ದ ಗುಡ್ಡಗಾಡಿನ ಪ್ರದೇಶವೊಂದರಲ್ಲಿ ಹೋಗುತ್ತಿದ್ದೆವು. ಇನ್ನು ನನಗಿದ್ದ ಮಾರ್ಗ ಕಾದು ನೋಡುವುದೊಂದೆ. ನನ್ನ ಕ್ಯಾಮೆರಾದಲ್ಲಿ ಡ್ರೈವ್ ಮಾಡುತ್ತಿದ್ದ ಅವಳ ಫೋಟೊ ತೆಗೆದೆ. ಫ್ರೇಮಿನ ಅರ್ಧ ಭಾಗವನ್ನು ಅವಳ ದಟ್ಟ ಕೆಂಪು ಕೂದಲು ಆವರಿಸಿತ್ತು. ಇನ್ನರ್ಧ ಭಾಗದಲ್ಲಿ ಅವಳ ನೀಳವಾದ ಮೂಗು ಮತ್ತು ಕಿರುನಗೆಯಿತ್ತು. ಕಣ್ಣಿಗೆ ಅಗಲವಾದ ಕಪ್ಪು ಸನ್‌ಗ್ಲಾಸ್ ಹಾಕಿದ್ದಳು. ಅವಳ ಹಿಂದೆ, ಕಾರಿನ ಬಲಬದಿಯ ಕನ್ನಡಿಯಲ್ಲಿ ಹಾದು ಹೋಗುತ್ತಿರುವ ಖಾಲಿ ರಸ್ತೆ ಮತ್ತು ಗುಡ್ಡಗಳಿದ್ದವು. ನಾನು ತೆಗೆದ ಚಿತ್ರವನ್ನು ಹತ್ತಿರದಿಂದ ನೋಡಿ ಆಸ್ವಾದಿಸುತ್ತಿದ್ದಾಗ ಕಾರನ್ನು ನಿಲ್ಲಿಸಿ, **‘come...’** ಎನ್ನುತ್ತಾ